# ಬಿಜಾಪುರದ ಐತಿಹಾಸಿಕ ಸ್ಮಾರಕಗಳು

ವಿಜಯಪುರವೆಂಬ ಹೆಸರನ್ನು ಹೊಂದಿದ್ದ ಬಿಜಾಪುರವು (ಉ.ಅ. 16°25’ ಮತ್ತು ಪೂ.ರೇ. 75°47’) ಕರ್ನಾಟಕ ರಾಜ್ಯದ ಜಿಲ್ಲಾ ಕೇಂದ್ರ. ಬೆಂಗಳೂರಿನಿಂದ ವಾಯುವ್ಯ–ಉತ್ತರಕ್ಕೆ 570 ಕಿ.ಮೀ ದೂರದಲ್ಲಿ, ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ 13 ರಲ್ಲಿರುವ ವಿಶ್ವಪ್ರಸಿದ್ಧ ಪ್ರವಾಸಿ ಕೇಂದ್ರವಾಗಿದೆ. ಬಿಜಾಪುರವು ಬಾದಾಮಿಯ ಚಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ ಮತ್ತು ಯಾದವ (ಸೇವುಣ) ರಾಜವಂಶೀಯರ ಕಾಲದಿಂದಲೂ ರಾಜಕೀಯ, ಸಾಹಿತ್ಯಕ, ಧಾರ್ಮಿಕ ಚಟುವಟಿಕೆಗಳ ಕೇಂದ್ರವಾಗಿತ್ತಲ್ಲದೆ ಪ್ರಸಿದ್ಧ ಅಗ್ರಹಾರವೂ ಆಗಿತ್ತು. ಪಂಪರಾಮಾಯಣವೆಂದು ಪ್ರಸಿದ್ಧವಾಗಿರುವ ರಾಮಚಂದ್ರಚರಿತ ಪುರಾಣದ ಕರ್ತೃ ನಾಗಚಂದ್ರ ಕವಿಯು (ಕ್ರಿ.ಶ. ಸು 1100) ಕಟ್ಟಿಸಿದನೆನ್ನಲಾದ ಜೈನ ದೇವಾಲಯ ಸಮುಚ್ಚಯವೂ ಈ ನಗರದಲ್ಲಿಯೇ ಇತ್ತು.

ದಕ್ಷಿಣ ಭಾರತದ ರಾಜಕೀಯ ಹಾಗೂ ಧಾರ್ಮಿಕ ಪರಿಸ್ಥಿತಿಯು ಕ್ರಿ.ಶ. 14ನೆಯ ಶತಮಾನದ ಮೊದಲ ದಶಕಗಳಲ್ಲಿನ ದೆಹಲಿ ಸುಲ್ತಾನರ ಆಳ್ವಿಕೆಯ ಫಲವಾಗಿ ಅನಿರೀಕ್ಷಿತವಾದ ಬದಲಾವಣೆಯನ್ನು ಕಂಡಿತು. ಅಲ್ಲಾವುದ್ದೀನ್ ಖಲ್ಜಿಯಿಂದ ಪ್ರಾರಂಭವಾದ ಇಸ್ಲಾಂ ಧರ್ಮ ಪ್ರಸರಣ ಮತ್ತು ರಾಜ್ಯ ವಿಸ್ತರಣ ಕಾರ್ಯಕ್ರಮ ಮುಹಮ್ಮದ್-ಬಿನ್ ತುಘಲಕ್ (ಕ್ರಿ.ಶ. 1325–1351)ನು ತನ್ನ ರಾಜಧಾನಿಯನ್ನು ದೆಹಲಿಯಿಂದ ದೌಲತಾಬಾದಿಗೆ ತಾತ್ಕಾಲಿಕವಾಗಿ ವರ್ಗಾಯಿಸುವುದರೊಂದಿಗೆ ನೆಲೆಗೊಂಡಿತು. ಆದರೆ ಸ್ಥಳೀಯ ಅಧಿಕಾರಿಗಳ ಮತ್ಸರದಿಂದಾಗಿ ಆಂತರಿಕ ರಾಜಕೀಯ ಪರಿಸ್ಥಿತಿಯು ಹದಗೆಟ್ಟು ಅಲ್ಪಾವಧಿಯಲ್ಲಿಯೇ ಹಲವು ರಾಜಪ್ರಮುಖರು ದಂಗೆಯೇಳುವುದರೊಂದಿಗೆ ಕೊನೆಗೊಂಡಿತು. ಈ ಸನ್ನಿವೇಶದಲ್ಲಿ ಗುಲ್ಬರ್ಗವನ್ನು ರಾಜಧಾನಿಯಾಗಿ ಮಾಡಿಕೊಂಡು ಹಸನ್‌ಗಂಗು (ಕ್ರಿ.ಶ. 1347–1358) ಬಹಮನಿ ಸಾಮ್ರಾಜ್ಯವನ್ನು ಸ್ಥಾಪಿಸಿದನು. ಒಂದು ಶತಮಾನಕ್ಕೂ ಹೆಚ್ಚು ಕಾಲ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಈ ಸಾಮ್ರಾಜ್ಯ, ಪ್ರಾಂತ್ಯಾಧಿಕಾರಿಗಳ ಸ್ವಾತಂತ್ರ್ಯಾಭಿಲಾಷೆ ಮತ್ತು ಮಹತ್ವಾಕಾಂಕ್ಷೆಗಳಿಂದಾಗಿ ಕ್ರಿ.ಶ. 1481ರ ವೇಳೆಗೆ ದುರ್ಬಲಗೊಂಡು ದಖನ್ನಿನ ಬೇರೆ ಬೇರೆ ಪ್ರಾಂತ್ಯಗಳಾಗಿ ವಿಭಜನೆಗೊಂಡಿತು. ಇಂತಹ ಪ್ರಕ್ಷುಬ್ಧ ಸನ್ನಿವೇಶದಲ್ಲಿ ಪ್ರಸಿದ್ಧ ಸೇನಾನಾಯಕ ಯೂಸುಫ್ ಆದಿಲ್‌ಶಾಹ


ಯೂಸುಫ್ ಆದಿಲ್‌ಷಾ (1489 -1510)


ಇಸ್ಮಾಯಿಲ್ (1510 -1534)


ಮೊದಲನೆಯ ಇಬ್ರಾಹಿಂ (1534 -1557)




ಮೊದಲನೆಯ ಅಲಿ (1558 -1580)


ಎರಡನೆಯ ಇಬ್ರಾಹಿಂ (1580 -1626)


ಮೊಹಮ್ಮದ್ (1626 -1656)


ಅಲಿ ಆದಿಲ್‌ಷಾ (1656 -1672)

(ಕ್ರಿ.ಶ. 1489–1510)ನು ಸ್ವತಂತ್ರನಾಗಿ ಬಿಜಾಪುರವನ್ನು ರಾಜಧಾನಿಯಾಗಿ ಮಾಡಿಕೊಂಡು ಆದಿಲ್‌ಶಾಹಿ ರಾಜ್ಯವನ್ನು ಸ್ಥಾಪಿಸಿದನು. ಯೂಸುಫ್ ಹಾಗೂ ಅವನ ನಂತರ ಆಳಿದ ಇಸ್ಮಾಯಿಲ್ (ಕ್ರಿ.ಶ. 1510–1534), ಮೊದಲನೆಯ ಇಬ್ರಾಹಿಂ (ಕ್ರಿ.ಶ. 1535–1558), ಮೊದಲನೆ ಅಲಿ (ಕ್ರಿ.ಶ. 1558–1580) ಇವರ ಸಾಹಸಮಯ ಪ್ರಯತ್ನಗಳಿಂದಾಗಿ ಈ ಸಾಮ್ರಾಜ್ಯವು ಬಲವಾಯಿತು. ಮೊದಲನೆಯ ಅಲಿ ಬಿಜಾಪುರವನ್ನು ಬಲಿಷ್ಠ ರಾಜಕೀಯ ಶಕ್ತಿಯನ್ನಾಗಿ ಬೆಳೆಸಿದನಲ್ಲದೆ ದಖನ್ನಿನ ಸುಲ್ತಾನರ ಒಕ್ಕೂಟದ ನೇತೃತ್ವ ವಹಿಸಿ ರಕ್ಕಸಗಿ–ತಂಗಡಗಿ ನಿರ್ಣಾಯಕ ಯುದ್ಧ (ಕ್ರಿ.ಶ. 1565)ದಲ್ಲಿ ಸುಪ್ರಸಿದ್ಧ ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಕಾರಣರಾದ ಮುಖ್ಯರಲ್ಲಿ ಒಬ್ಬನಾದನು. ಧರ್ಮ ಸಹಿಷ್ಣುಗಳಾದ ಎರಡನೆಯ ಇಬ್ರಾಹಿಂ (ಕ್ರಿ.ಶ. 1580–1626) ಮತ್ತು ಮುಹಮ್ಮದ್ (ಕ್ರಿ.ಶ. 1626–1656)ರ ಆಳ್ವಿಕೆಯಲ್ಲಿ ಈ ಸಾಮ್ರಾಜ್ಯವು ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿತು.

ಎರಡನೆಯ ಅಲಿ (ಕ್ರಿ.ಶ. 1656–1672)ಯ ಅಲ್ಪ ಕಾಲದ ಆಳ್ವಿಕೆಯ ನಂತರ ಮುಘಲರ ಎಡೆಬಿಡದ ದಾಳಿಗಳಿಂದ ಅವನತಿಯತ್ತ ಸಾಗಿದ್ದ ಬಿಜಾಪುರವು ಅಂತಿಮವಾಗಿ ಔರಂಗಜೇಬನೊಡನೆ ನಡೆದ (ಕ್ರಿ.ಶ. 1686) ಕದನದಲ್ಲಿ ತನ್ನ ಆಸ್ತಿತ್ವವನ್ನು ಸಂಪೂರ್ಣವಾಗಿ ಕಳೆದುಕೊಂಡು ಕ್ರಮೇಣ ಮರಾಠಾ ರಾಜ್ಯದ ಒಂದು ಭಾಗವಾಯಿತು.

ಹೀಗೆ ಶ್ರೇಷ್ಠ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದ್ದ ಬಿಜಾಪುರವು ಆದಿಲ್‌ಶಾಹಿ ರಾಜವಂಶದ ಆಳ್ವಿಕೆಯಲ್ಲಿ (ಕ್ರಿ.ಶ. 15–17ನೆಯ ಶತಮಾನ) ಪ್ರಮುಖ ರಾಜಕೀಯ ಕೇಂದ್ರ ಹಾಗೂ ಕಲಾಕ್ಷೇತ್ರವಾಗಿ ಬೆಳೆಯಿತು.

ಆದಿಲ್‌ಶಾಹಿ ದೊರೆಗಳು ಸಮರ್ಥ ಸಾಮ್ರಾಜ್ಯ ನಿರ್ಮಾಪಕರಾಗಿದ್ದುದರ ಜೊತೆಗೆ ವಿವಿಧ ಲಲಿತಕಲೆಗಳನ್ನು ಪ್ರೋತ್ಸಾಹಿಸಿದರು. ಸಾಹಿತ್ಯ ಸಂಗೀತಗಳಿಗೆ ಆಶ್ರಯಸ್ಥಾನವಾಗಿದ್ದ ಬಿಜಾಪುರದಲ್ಲಿ ದಖನ್ನಿನ ಪ್ರಸಿದ್ಧ ಕಲಾ ಪ್ರಕಾರವಾದ ಚಿಕಣಿ ಚಿತ್ರಕಲೆಯು ಉತ್ತುಂಗಕ್ಕೇರಿತು. ವಿವಿಧ ತಲವಿನ್ಯಾಸವನ್ನು ಪ್ರದರ್ಶಿಸುವ ರಾಜಸೌಧ, ವಿವಿಧ ಸಾಮಾಜಿಕ ಹಾಗೂ ಧಾರ್ಮಿಕ ಕಟ್ಟಡ, ವರ್ಣರಂಜಿತ ವಿಹಾರಭವನ, ಅಪೂರ್ವ ತಾಂತ್ರಿಕ ನೈಪುಣ್ಯವನ್ನು ಪ್ರದರ್ಶಿಸುವ ಜಲಪೂರೈಕೆಯ ರಚನೆ, ದುರ್ಗಮ ರಕ್ಷಣಾ ವ್ಯವಸ್ಥೆಯ ಕಟ್ಟಡ, ಮತ್ತಿತರ ಅನೇಕ ನಿರ್ಮಿತಿಗಳಿಂದ ರಾಜಧಾನಿಯು ಅಲಂಕೃತವಾಗಿದ್ದು, ಈಗ ಉಳಿದಿರುವ ಭಗ್ನಾವಶೇಷಗಳು ಬಿಜಾಪುರದ ಅಂದಿನ ವೈಭವ ಹಾಗೂ ವಾಸ್ತು ಸಾಧನೆಗಳ ಅಪ್ರತಿಮ ಕುರುಹುಗಳಾಗಿ ಕಂಗೊಳಿಸುತ್ತಿವೆ.

ದಕ್ಷಿಣ ಭಾರತದ ಪ್ರಾರಂಭಿಕ ಹಂತದ ಮುಹಮ್ಮದೀಯ ಕಟ್ಟಡಗಳು ಪ್ರಚಲಿತವಿದ್ದ ಇಸ್ಲಾಮೀ ಶೈಲಿಗಳ ಅನುಕರಣೆಗಳಾಗಿದ್ದರೂ ಕ್ರಮೇಣ ಸ್ಥಳೀಯ ಹಿಂದೂ ವಾಸ್ತುಶೈಲಿಯ ಉತ್ತಮ ಲಕ್ಷಣಗಳ ಔಚಿತ್ಯಪೂರ್ಣ ಅಳವಡಿಕೆಯಿಂದ ವಿಶಿಷ್ಟ ಶೈಲಿಯಾಗಿ ಉಗಮಿಸಿ, ಆದಿಲ್‌ಶಾಹಿಗಳ



ಕಾಲದಲ್ಲಿ ಸುಂದರ ಸ್ವತಂತ್ರ ಪ್ರಾದೇಶಿಕ ಹಿಂದೂ–ಇಸ್ಲಾಂ ಶೈಲಿಯಾಗಿ ರೂಪುಗೊಂಡು ಪರಾಕಾಷ್ಠೆಯನ್ನು ತಲುಪಿತು. ಕಮಲದಳಗಳಿಂದ ಅಲಂಕೃತವಾದ ವೇದಿಕೆಯ ಮೇಲೇರುವ ಚಿತ್ತಾಕರ್ಷಕ ಗುಮ್ಮಟ, ಮೇಲ್ಛಾವಣಿಯ ಮೋಹಕ ಕಂಗುರಗಳ ಸಾಲು, ಅವುಗಳಿಗೆ ಆಧಾರವಾಗಿರುವ ಶ್ರೀಮಂತ ಕೆತ್ತನೆಯ ಚೆಜ್ಜ, ಕಮಾನುಗಳು, ಮೂಲೆಗಳಲ್ಲಿಯ ಸೂಕ್ಷ್ಮ ಅಲಂಕರಣ ಇವು ಬಿಜಾಪುರ ವಾಸ್ತು ಶೈಲಿಯ ಕೆಲವು ವಿಶಿಷ್ಟ ಲಕ್ಷಣಗಳು. ಗಚ್ಚು ಗಾರೆಯ ಮನೋಹರ ಲತಾವಿನ್ಯಾಸದ ಅಲಂಕರಣವಿರುವ ಹೊರ ಭಿತ್ತಿಗಳು ಈ ನಿರ್ಮಿತಿಗಳ ಸೌಂದರ್ಯವನ್ನು ಹೆಚ್ಚಿಸಿವೆ. ಜೊತೆಗೆ ಕೆಲವು ಪ್ರಮುಖ ಧಾರ್ಮಿಕ ಹಾಗೂ ಸಾಮಾಜಿಕ ಕಟ್ಟಡಗಳನ್ನು ರಂಜಕ ವರ್ಣಗಳ ಭಿತ್ತಿಚಿತ್ರಗಳಿಂದಲೂ ಅಲಂಕರಿಸಲಾಗಿದೆ.

ಬಿಜಾಪುರ ಮತ್ತು ಪರಿಸರದಲ್ಲಿ ಆದಿಲ್‌ಶಾಹಿ ಕಾಲ ಮತ್ತು ಶೈಲಿಯ ನೂರಿಪ್ಪತ್ತಕ್ಕೂ ಹೆಚ್ಚು ವಿವಿಧ ಗಾತ್ರ, ವಿನ್ಯಾಸದ ಸ್ಮಾರಕಾವಶೇಷಗಳಿವೆ. ಇವುಗಳಲ್ಲಿ ಅತ್ಯಂತ ಪ್ರಮುಖವಾದ 73 ಸ್ಮಾರಕಗಳು ಸಂರಕ್ಷಿತ ರಾಷ್ಟ್ರೀಯ ಸ್ಮಾರಕಗಳೆಂದು ಘೋಷಿಸಲ್ಪಟ್ಟು ಭಾರತೀಯ ಪುರಾತತ್ತ್ವ ಇಲಾಖೆಯ ಧಾರವಾಡ ವಲಯದ ಮೇಲ್ವಿಚಾರಣೆಗೆ ಒಳಪಟ್ಟಿವೆ.

ಪ್ರವಾಸಿಗರ ಅನುಕೂಲತೆಯ ದೃಷ್ಟಿಯಿಂದ ಇಲ್ಲಿನ ಸ್ಮಾರಕಗಳನ್ನು ಐದು ವಿಭಾಗಗಳಾಗಿ ವಿಂಗಡಿಸಬಹುದಾಗಿದೆ.


1. ಕೋಟೆ–ಕೊತ್ತಲ, ಬುರುಜುಗಳು.
2. ಉಪನಗರಗಳು ಮತ್ತು ನೀರಿನ ಸರಬರಾಜು.
3. ಅರಮನೆ, ಮಹಲ್, ನ್ಯಾಯ ಮಂದಿರಗಳು.
4. ಪ್ರಾರ್ಥನಾ ಮಂದಿರ ಅಥವಾ ಮಸೀದಿಗಳು.
5. ಸಮಾಧಿ ಅಥವಾ ಗೋರಿಗಳು.
6. ಪ್ರಾಚ್ಯವಸ್ತು ಸಂಗ್ರಹಾಲಯ

# ಕೋಟೆ-ಕೊತ್ತಲ ಹಾಗೂ ಬುರುಜುಗಳು



## ಕೋಟೆ ಮತು ಅರಕಿಲ್ಲಾ

ಬಿಜಾಪುರ ನಗರವು ಬಲವಾದ ಕೋಟೆಯಿಂದ ಸುತ್ತುವರಿದಿದೆ. ಇದು ನಮ್ಮ ದೇಶದಲ್ಲಿ ಸಾಕಷ್ಟು ಸುಸ್ಥಿತಿಯಲ್ಲಿ ಉಳಿದುಬಂದಿರುವ ದೊಡ್ಡ ಕೋಟೆಗಳಲ್ಲೊಂದು. ಸುರಕ್ಷತೆಯ ದೃಷ್ಟಿಯಿಂದ ಯೂಸುಫ್ ಆದಿಲ್‌ಶಾಹನು ಈ ಸ್ಥಳವನ್ನು ತನ್ನ ಕೋಟೆಗಾಗಿ ಆರಿಸಿಕೊಂಡನು. ಸುಮಾರು 10 ಕಿ.ಮೀ. ಸುತ್ತಳತೆಯ, ವೃತ್ತಾಕಾರದ ಈ ಅಭೇದ್ಯ ಕೋಟೆಯ ಮೂಲೆಗಳಲ್ಲಿ ವಿವಿಧ ವಿನ್ಯಾಸದ ಅನೇಕ ಬತೇರಿ, ಬುರುಜುಗಳಿವೆ. ಸುಭದ್ರವಾದ ಪರದೆಗೋಡೆ, ಬಲಿಷ್ಠ ಕಾವಲುಭಟರಿದ್ದ ಪ್ರವೇಶ ದ್ವಾರಗಳು, ಹೊರ ಪರಿಧಿಯಲ್ಲಿ ಕಂದಕ ಮತ್ತು ದಿಣ್ಣೆಗಳು ಈ ಕೋಟೆಯ ರಚನೆಯಲ್ಲಿನ ವೈಶಿಷ್ಟ್ಯಗಳಾಗಿವೆ. ಇದಲ್ಲದೆ ಅರಮನೆ



ಕೋಟೆ ಗೋಡೆಯ ಅವಶೇಷ



ಪ್ರದೇಶವನ್ನು ಸುತ್ತುವರಿದ ಅರಕಿಲ್ಲಾ ಎಂಬ ಒಳಕೋಟೆಯೂ ಇದೆ. ನಗರದ ಕೇಂದ್ರದಲ್ಲಿರುವ ಇದು ಕುತೂಹಲಕರವಾದ ಭಾಗ. ಹೊರಕೋಟೆಯು ದೀರ್ಘ ವೃತ್ತಾಕಾರದಲ್ಲಿದೆ. ಕ್ರಿ.ಶ. 1565ರಲ್ಲಿ ವಿಜಯನಗರದ ಮೇಲೆ ವಿಜಯ ಸಾಧಿಸಿದ ನಂತರ ಅಲಿ ಆದಿಲ್ ಶಾಹನು ಈ ಕೋಟೆಯನ್ನು ಕಟ್ಟಲು ಪ್ರಾರಂಭಿಸಿ ಒಂದೊಂದು ಭಾಗವನ್ನು ಒಬ್ಬೊಬ್ಬ ಸರದಾರನಿಗೆ ನಿರ್ಮಿಸಲು ಒಪ್ಪಿಸಿದನು. ಆದುದರಿಂದ ಇದರ ನಿರ್ಮಾಣದಲ್ಲಿ ವೈವಿಧ್ಯ ಕಾಣುತ್ತದೆ. ಕೋಟೆಯ ಹೊರ ಮತ್ತು ಒಳಮೈಗಳು ದಪ್ಪಕಲ್ಲು ಮತ್ತು ಗಾರೆಯಿಂದ ನಿರ್ಮಾಣಗೊಂಡಿದ್ದು, ಮಧ್ಯದಲ್ಲಿ ಮಣ್ಣನ್ನು ತುಂಬಿದೆ. ಕೋಟೆಯ ಗೋಡೆ ಸುಮಾರು 6 ಮೀ. ಅಗಲ ಮತ್ತು 9 ಮೀ. ಎತ್ತರವಿದೆ. ಕೋಟೆಯ ಹೊರಗೆ 12 ರಿಂದ 15 ಮೀ. ಅಗಲ ಮತ್ತು 6 ಮೀ ಆಳವಾದ ದೊಡ್ಡ ಕಂದಕವಿದೆ. ಕಂದಕವನ್ನು ಕೆಲವೆಡೆ ನೆಲದಲ್ಲಿ ಕಲ್ಲನ್ನು ಕತ್ತರಿಸಿ ತೋಡಲಾಗಿದೆ. ಕಂದಕವನ್ನು ತೋಡಿದಾಗ ಹೊರಬಂದ ಕಲ್ಲು ಮಣ್ಣನ್ನು ಕೋಟೆಯನ್ನು ಕಟ್ಟಲು ಬಳಸಲಾಗಿದೆ. ಕೋಟೆಯಲ್ಲಿ ಐದು ಮುಖ್ಯ ಬಾಗಿಲುಗಳು (ದರ್ವಾಜ) ಮತ್ತು ಅವುಗಳ ಪಾರ್ಶ್ವದಲ್ಲಿರುವ ಕೊತ್ತಳಗಳಲ್ಲದೆ ಇನ್ನೂ 96 ಕೊತ್ತಳಗಳಿವೆ. ಎರಡು ಕೊತ್ತಳಗಳ ಆವರಣದ ಪಶ್ಚಿಮಕ್ಕೆ ಒಳಬಾಗಿಲಿದೆ. ಬಹುಮಟ್ಟಿಗೆ ಹಾಳಾದ ವಿವಿಧ ಗಾತ್ರ ವಿನ್ಯಾಸದ ಅರಮನೆಗಳು, ನೀರು ಸರಬರಾಜು ಮಾಡುವ ಕೊಳವೆ, ಕಾರಂಜಿ ಮುಂತಾದವುಗಳು ಬಿಜಾಪುರದ ಪ್ರಾಚೀನ ವೈಭವದ ಜೀವಂತ ಕುರುಹುಗಳಾಗಿ ನಿಂತಿವೆ.



ಬಾಗಿಲು (ದರ್ವಾಜ)

## ಮಾಲಿಕ್-ಎ-ಮೈದಾನ್

ಬಿಜಾಪುರದ ಅವಶೇಷಗಳಲ್ಲಿ ಅತ್ಯಂತ ಆಕರ್ಷಣೀಯವಾದ ಪ್ರಾಚ್ಯವಸ್ತು 'ಮಾಲೀಕ್-ಎ-ಮೈದಾನ್' ಫಿರಂಗಿ. ರಣರಂಗದ ರಾಜ ಎಂದು ಅದರ ಅರ್ಥ. 14 ಅಡಿ 4 ಅಂಗುಲ ಉದ್ದ ಹಾಗೂ



ಮಾಲಿಕ್-ಎ-ಮೈದಾನ್

4 ಅಡಿ 11 ಅಂಗುಲ ವ್ಯಾಸದ ಈ ಫಿರಂಗಿಯು 55 ಟನ್ ಭಾರವಿದ್ದು ಬಿಜಾಪುರದಲ್ಲಿಯೇ ಅತಿ ದೊಡ್ಡದು. ಅಹ್ಮದ್ ನಗರದ ರಾಜನ ಆಸ್ಥಾನದಲ್ಲಿದ್ದ ಮುಹ್ಮದ್ ಬಿನ್ ಹಸನ್‌ರೂಮಿ ಎಂಬ ಟರ್ಕಿಷ್ ಅಧಿಕಾರಿಯು ಕ್ರಿ.ಶ. 1549 ರಲ್ಲಿ ಇದನ್ನು ತಯಾರಿಸಿದನೆಂದು ಅದರ ಮೇಲಿರುವ ಪರ್ಶಿಯನ್ ಶಾಸನದಿಂದ ತಿಳಿದುಬರುತ್ತದೆ. ಅದನ್ನು 1565 ರ ರಕ್ಕಸಗಿ-ತಂಗಡಗಿ ಯುದ್ಧದ ಸಮಯದಲ್ಲಿ ವಿಜಯನಗರ ಸೈನ್ಯದ ವಿರುದ್ಧ ಬಳಸಲಾಯಿತೆಂದೂ ಹೇಳಲಾಗುತ್ತದೆ. ಹಿಂತಿರುಗಿ ಹೋಗುವಾಗ ಪರಾಂಡಾದ ಕೋಟೆಯಲ್ಲಿದ್ದ ಫಿರಂಗಿಯನ್ನು ಮುಹಮ್ಮದ್ ಆದಿಲ್‌ಶಾಹನ ಸಚಿವ ಮುರಾರಿಪಂತನು ಕ್ರಿ.ಶ. 22-9-1623 ರಂದು ಬಿಜಾಪುರಕ್ಕೆ ತಂದನಂತೆ. ಅದಕ್ಕಾಗಿಯೇ ನಗರದ ಪಶ್ಚಿಮದ ಕೋಟೆಯಲ್ಲಿ ಪ್ರತ್ಯೇಕವಾಗಿ ಶೇರ್ಜಾ ಬುರುಜನ್ನು ಕಟ್ಟಲಾಯಿತು.



## ಹೈದರಿ ಬುರುಜು (ಉಪಲಿ ಬುರುಜು)



ಉಪಲಿ ಬುರುಜು

ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಸೇನಾಪತಿ ಹೈದರ್‌ಖಾನನು ಕ್ರಿ.ಶ. 1584ರಲ್ಲಿ ಎಂಬತ್ತು ಅಡಿ ಎತ್ತರದ ಭವ್ಯ ಯುದ್ಧ ಗೋಪುರವನ್ನು ಕಟ್ಟಿದನೆಂದು ಗೋಪುರದ ಗೋಡೆಯ ಮೇಲಿನ ಶಾಸನ ತಿಳಿಸುತ್ತದೆ. ಸುತ್ತುವರಿದು ಹೋಗುವ ಕಲ್ಲಿನ ಮೆಟ್ಟಿಲುಗಳ ಮೂಲಕ ಮೇಲೆ ಹೋದಾಗ ಇಡೀ ನಗರದ ದೃಶ್ಯ ಸುಂದರವಾಗಿ ಕಾಣುವುದಲ್ಲದೆ ಪಶ್ಚಿಮ ಉತ್ತರ ದಿಕ್ಕುಗಳಲ್ಲಿ ಬಹುದೂರದವರೆಗೂ ನೋಡಬಹುದು. ಇದನ್ನು ಎತ್ತರದ ದಿಣ್ಣೆಯ ಮೇಲೆ ಕಟ್ಟಿರುವುದರಿಂದ ಹೊರಗಿನಿಂದ ಬರುವ ಪ್ರವಾಸಿಗಳಿಗೆ ನಾಲ್ಕು ದಿಕ್ಕುಗಳಲ್ಲೂ ಗೋಳಗುಮ್ಮಟದ ಜೊತೆಗೆ ಎದ್ದು ಕಾಣುತ್ತದೆ. ಗೋಪುರದ ಮೇಲೆ ಯುದ್ಧ ಸಾಮಗ್ರಿಗಳ ಸಂಗ್ರಹಣೆಗಾಗಿ ವಿಶಾಲ ಸ್ಥಳವಿದೆ. ಇಲ್ಲಿ ಎರಡು ಕಬ್ಬಿಣದ ಫಿರಂಗಿಗಳೂ ಇವೆ. 30 ಅಡಿ 8 ಅಂಗುಲ ಉದ್ದ, 3 ಅಡಿ 2 ಅಂಗುಲ ವ್ಯಾಸದ ಫಿರಂಗಿಗಳನ್ನು ಇದರ ಮೇಲೆ ಸಾಗಿಸಿ ಸ್ಥಾಪಿಸಿರುವುದನ್ನು ಕಂಡು ಪ್ರವಾಸಿ ಆಶ್ಚರ್ಯಗೊಳ್ಳದಿರಲಾರ.



ಉಪಲಿ ಬುರುಜಿನ ಮೇಲಿರುವ ಫಿರಂಗಿಗಳು



# ಉಪನಗರಗಳು ಮತ್ತು ನೀರಿನ ಸರಬರಾಜು

ಎರಡು ಕಿ.ಮೀ ಸುತ್ತಳತೆಯುಳ್ಳ ಅರಮನೆಯ ಸುತ್ತಲೂ ಹನ್ನೊಂದು ಕಿ.ಮೀ ಸುತ್ತಳತೆಯ ಬಿಜಾಪುರ ನಗರವಿದ್ದು, ನಾಲ್ಕು ದಿಕ್ಕುಗಳಲ್ಲೂ ಸುಮಾರು 25 ಕಿ.ಮೀ ಸುತ್ತಳತೆಯಲ್ಲಿ ಅಫಜಲ್‌ಪುರ, ಅಲ್ಲಾಪುರ, ಆಗಾಪುರ, ಇಬ್ರಾಹಿಂಪುರ, ಏಕಟಾಪುರ, ಐನಾಪುರ, ಖತೀಜಾಪುರ, ಖುದಾನಪುರ, ಚಂದಾಪುರ, ಜೋರಾಪುರ, ತಕ್ಕಿಯಾ, ತವರಪುರ, ನವರಸಪುರ, ಪಾಚ್ಛಾಪುರ (ಬಾದಶಾಹ್‌ಪುರ), ಫಕೀರಾಬಾದ್, ಫತೇಪುರ, ಬಮ್ಮನಳ್ಳಿ, ರಂಭಾಪುರ, ಶಹಾಪುರ ಮುಂತಾದ ಹೆಸರುಗಳ ಉಪನಗರಗಳಿದ್ದುವು. ಇಲ್ಲಿ ವಾಸಿಸುತ್ತಿದ್ದ ಬಾದಶಹರು, ಸರದಾರರು, ಸೇನಾಪತಿಗಳು ವಣಿಕ್ಕರು ತಮಗಾಗಿ ಸುಂದರವಾದ ಮಹಲ್‌ಗಳನ್ನು ಉದ್ಯಾನವನಗಳನ್ನು ಕಟ್ಟಿಕೊಂಡಿದ್ದರು. ಆದರೆ ಇಂದು ಎಲ್ಲಿ ನೋಡಿದರೂ ಹಾಳಾದ ಅವಶೇಷಗಳು ಮಾತ್ರ ಕಾಣಸಿಗುತ್ತವೆ.

ಆದಿಲ್‌ಶಾಹಿ ಅರಸರು ಮಾಡಿದ ನೀರಿನ ವ್ಯವಸ್ಥೆ ಹಾಗೂ ಅದರ ವಾಸ್ತುಶಿಲ್ಪ ಆಧುನಿಕರನ್ನೂ ಅಚ್ಚರಿಗೊಳಿಸುತ್ತದೆ. ಬಿಜಾಪುರ ನಗರದ ಪಶ್ಚಿಮ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಭೂಮಿಯ ಮಟ್ಟ ಎತ್ತರವಾಗಿದ್ದುದನ್ನು ಗಮನಿಸಿ, ಅಲ್ಲಿ ಬಿದ್ದ ಮಳೆಯ ನೀರಿನ ಒಂದು ಹನಿಯನ್ನೂ ವ್ಯರ್ಥಮಾಡದೆ ಸಂಗ್ರಹಿಸಿ ನಗರಕ್ಕೆ ತಂದಿದ್ದಾರೆ. ಇದೊಂದು ಅಂದಿನ ಶಿಲ್ಪಿಗಳ ಅಗಾಧ ನೈಪುಣ್ಯಕ್ಕೆ ಸಾಕ್ಷಿಯಾಗಿದೆ.

## ಚಾಂದಬಾವಡಿ

ಕ್ರಿ.ಶ. 1579ರಲ್ಲಿ ಮೊದಲ ಅಲಿ ಆದಿಲ್‌ಶಾಹನು ತನ್ನ ಹೆಂಡತಿ ಚಾಂದಬೀಬಿಯ ಗೌರವ ದ್ಯೋತಕವಾಗಿ ಈ ಬಾವಿಯನ್ನು ಕಟ್ಟಿಸಿದನು. ನಗರದ ಉತ್ತರ–ಪಶ್ಚಿಮಗಳ ಭಾಗದಲ್ಲಿ ಬರುವ ಶಹಾಪುರ ಉಪನಗರದ







ದ್ವಾರದ ಬಳಿ ಸುಮಾರು 400 ಅಡಿಗಳ ಅಂತರದಲ್ಲಿ ಇರುವ ಬಾವಿಯು ಇಂದಿಗೂ ಕಣ್ಣಿಗೆ ಹಬ್ಬ ತರುತ್ತದೆ. ಪೂರ್ವ–ಪಶ್ಚಿಮ 144 ಅಡಿ, ಉತ್ತರ–ದಕ್ಷಿಣ 156 ಅಡಿಗಳ ಚೌಕೋನಾಕಾರದ ಈ ಬಾವಿಗೆ 4 ಕಡೆಗಳಲ್ಲೂ ಕಲ್ಲಿನ ಮೆಟ್ಟಿಲುಗಳನ್ನು ಕಟ್ಟಲಾಗಿದೆ. ದೊಡ್ಡ ಕಮಾನಿನ ಮಹಾದ್ವಾರ ಬಾವಿಯ ಗೋಡೆಗಳಿಗೆ ಹೊಂದಿಕೊಂಡಿದೆ. ಉಳಿದ ಮೂರು ದಿಕ್ಕುಗಳಲ್ಲಿ ದೊಡ್ಡ ಕಿಂಡಿಗಳಿವೆ. ಇದು ಮುಂದಿನ ಕಾಲದಲ್ಲಿ ನಿರ್ಮಿತವಾದ ತಾಜಬಾವಡಿಗೆ ಮಾದರಿಯಾಗಿರಬೇಕು.

## ತಾಜ್ ಬಾವಡಿ

ಮೊದಲ ಅಲಿ ಆದಿಲ್‌ಶಾಹನ ನಂತರ ಪಟ್ಟಕ್ಕೆ ಬಂದ ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನು ತನ್ನ ಹೆಂಡತಿ ತಾಜ್‌ಸುಲ್ತಾನಾ ಹೆಸರಿನಲ್ಲಿ ತಾಜ ಬಾವಡಿಯನ್ನು ಕ್ರಿ.ಶ. 1620ರಲ್ಲಿ ಕಟ್ಟಿಸಿದ. ಉತ್ತರಾಭಿಮುಖವಾದ ಈ ಬಾವಿಯು ಮೆಕ್ಕಾ ಮಹಾದ್ವಾರದ ಹತ್ತಿರವಿದೆ. 35 ಅಡಿ ಎತ್ತರದ ಕಮಾನಿನ ಮಹಾದ್ವಾರ, ಅದರ ಎರಡು ಕಡೆಗಳಲ್ಲೂ ಉನ್ನತ ಗುಮ್ಮಟ ಗೋಪುರಗಳು, ಒಳಹೊಕ್ಕೊಡನೆ ಎದುರಿಗೆ ಪರದೆಯ ಗೋಡೆಗಳು



ತಾಜ್ ಬಾವಡಿ

ಕಾಣುತ್ತವೆ. 120 ಅಡಿ ಉದ್ದ, 100 ಅಡಿ ಅಗಲದ ಬಾವಿ 52 ಅಡಿ ಆಳವಾಗಿದೆ. ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ದಿಕ್ಕುಗಳಲ್ಲಿ ಬಾವಿಯ ಗೋಡೆಗೆ ಹೊಂದಿಕೊಂಡಂತೆ ವಿಶ್ರಾಂತಿಧಾಮಗಳಿವೆ.

### ಬೇಗಂ ತಾಲಾಬ

ಅಲಿ ಆದಿಲ್‌ಶಾಹನ ಕಾಲದಲ್ಲಿ ಪ್ರಾರಂಭವಾದ ತೊರವೆಯಿಂದ ಬಿಜಾಪುರಕ್ಕೆ ನೀರು ಪೂರೈಕೆ ಯೋಜನೆ ಹಾಗೂ ಹಲವಾರು ಸಂಗ್ರಹ ಬಾವಿಗಳನ್ನು ಕಟ್ಟಿದ್ದರೂ ದಿನೇ ದಿನೇ ವಿಸ್ತಾರವಾಗುತ್ತಿದ್ದ ನಗರಕ್ಕೆ ಸಮರ್ಪಕವಾಗಿ ನೀರು ಪೂರೈಸುವುದು ಸಾಧ್ಯವಾಗಿರಲಿಲ್ಲ. ಆದುದರಿಂದ ಆತನ ಮೊಮ್ಮಗ ಮುಹಮ್ಮದ್ ಆದಿಲ್‌ಶಾಹನ ಕಾಲದಲ್ಲಿ ಹೊರಗಿನಿಂದ ನೀರು ತರುವ ಇನ್ನೊಂದು ಬೃಹತ್ ಯೋಜನೆ ಪ್ರಾರಂಭವಾಯಿತು. ಈ ಉದ್ದೇಶದಿಂದ ನಗರಕ್ಕೆ ದಕ್ಷಿಣ ದಿಕ್ಕಿನಲ್ಲಿ ಸುಮಾರು ಎರಡು ಕಿ.ಮೀ ಅಂತರದಲ್ಲಿ ಸುಧಾರಿಸಿದ ವಾಸ್ತು ರಚನೆಯಲ್ಲಿರುವ ಬೇಗಂ ತಾಲಾಬ್ ಎಂಬ ಕೆರೆಯನ್ನು ಕಟ್ಟಲಾಯಿತು.



## ಅರಮನೆ, ಮಹಲ್, ನ್ಯಾಯ ಮಂದಿರಗಳು



ಆದಿಲ್‌ಶಾಹಿ ರಾಜ್ಯದ ಸಂಸ್ಥಾಪಕ ಯೂಸುಫ್ ಆದಿಲ್‌ಶಾಹನು ಫಾರೂಕ್ ಮಹಲನ್ನು ಕಟ್ಟಿಸಿದ (ಕ್ರಿ.ಶ. 1505–06). ನಂತರ ಪಟ್ಟಕ್ಕೆ ಬಂದ ಇಸ್ಮಾಯಿಲ್ಲನು ಕ್ರಿ.ಶ. 1520–21ರಲ್ಲಿ ಚಂಪಾ ಮಹಲನ್ನು ಕಟ್ಟಿಸಿದನು. ಆದರೆ ಇಂದು ಇವುಗಳ ಅವಶೇಷಗಳು ದೊರೆಯುವುದಿಲ್ಲ. ಮೊದಲನೆಯ ಇಬ್ರಾಹಿಮನು ಹದಿನಾರು ಕಂಬಗಳ ಸೋಲಹ ಕಂಬ ಮಹಲ್ ಕಟ್ಟಿಸಿದನೆಂಬ ಉಲ್ಲೇಖವೂ ಇದೆ. ಬಿಜಾಪುರದಲ್ಲಿ ಕಟ್ಟಡಗಳ ರಚನೆ ಭರದಿಂದ ನಡೆದದ್ದು ಮೊದಲನೆಯ ಅಲಿ ಆದಿಲ್‌ಶಾಹನ ಕಾಲದಲ್ಲಿ. ಆತನು ಕ್ರಿ.ಶ. 1560–61ರಲ್ಲಿ 'ಹೀರಾಮಹಲ್', 1561–62ರಲ್ಲಿ 'ಕಂಕಣಮಹಲ್', 1571ರಲ್ಲಿ ಅತ್ಯಂತ ಎತ್ತರವಾದ 'ಗಗನ ಮಹಲ್'ಗಳನ್ನು ಕಟ್ಟಿಸಿದನಂತೆ. ಇವುಗಳಲ್ಲಿ ಹೀರಾಮಹಲ್ ಅನ್ನು ಗುರುತಿಸಲಾಗಿಲ್ಲ. ಕ್ರಿ.ಶ. 1646ರಲ್ಲಿ ಗಗನ ಮಹಲ್ ಸ್ವಲ್ಪಮಟ್ಟಿಗೆ ಸುಟ್ಟುಹೋಯಿತೆಂದು ತಿಳಿಯುತ್ತದೆ. ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನು ಏಳು ಅಂತಸ್ತುಗಳಿಂದ ಕೂಡಿರುವ 'ಸಾತ್ ಮಂಜಿಲ್' ಮಹಲನ್ನು ಕ್ರಿ.ಶ. 1582ರಲ್ಲಿ, ಕ್ರಿ.ಶ. 1588ರಲ್ಲಿ ಆನಂದ್ ಮಹಲ್‌ಗಳನ್ನು ಕಟ್ಟಿಸಿದನು. ಆ ಮೊದಲೇ 'ಬುಲಂದ್ ಮಹಲ್' ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದ್ದನೆಂಬ ಉಲ್ಲೇಖವಿದ್ದು ದಿಲ್‌ಖುಶ್‌ಮಹಲನ್ನು ಕೂಡ ಕಟ್ಟಿಸಿದ್ದನಂತೆ.



ಗಗನ ಮಹಲ್

## ಅಸಾರ್ ಮಹಲ್



ಸಾತ್ ಮಂಜಿಲ್

ಕ್ರಿ.ಶ. 1646ರಲ್ಲಿ ಸುಲ್ತಾನ್ ಮುಹಮ್ಮದ್ ಆದಿಲ್‌ಶಾಹನು ಅಸಾರ್ ಮಹಲನ್ನು ಕಟ್ಟಿಸಿದನು. ಹದಿನೈದು ಸಾವಿರ ಚದರಡಿಯಷ್ಟು ವಿಸ್ತಾರವಾದ ಈ ಭವ್ಯ ಕಟ್ಟಡವನ್ನು ಹೊಸದಾಗಿ ನ್ಯಾಯಾಲಯಕ್ಕಾಗಿಯೇ ಎಂದು ಕಟ್ಟಲಾಯಿತು. ಈ ಕಟ್ಟಡಕ್ಕೆ 'ದಾದ್ ಮಹಲ್' ಎಂಬ ಹೆಸರೂ ಇತ್ತು. ಈ ಕಟ್ಟಡವು ಇದರ ಒಳಾಂಗಣದಲ್ಲಿರುವ ಭಿತ್ತಿಚಿತ್ರಗಳಿಂದ ಪ್ರಸಿದ್ಧವಾಗಿದೆ. ನ್ಯಾಯಾಲಯಕ್ಕಾಗಿ ಆ ಮೊದಲೇ ಅರಕಿಲ್ಲೆಯ ಒಳಗಡೆ ಅದಾಲತ್ ಮಹಲ್ ಅನ್ನು ಕಟ್ಟಲಾಗಿತ್ತು.

## ಚೀನೀ ಅಥವಾ ಫರೂಕ್ ಮಹಲ್

ಈ ಕಟ್ಟಡದ ಮಧ್ಯದಲ್ಲಿ ವಿಶಾಲವಾದ ದರ್ಬಾರ್ ಸಭಾಂಗಣವಿದ್ದು, ಇಕ್ಕೆಲಗಳಲ್ಲಿ ಕೊಠಡಿಗಳಿವೆ. ಇದನ್ನು ಯೂಸುಫ್ ಆದಿಲ್‌ಶಾಹನು

ಅಸಾರ್ ಮಹಲ್



ಅಸಾರ್ ಮಹಲ್‌ನಲ್ಲಿರು ಭಿತ್ತಿಚಿತ್ರ








ಪಾನಿ ಮಹಲ್

ಕಟ್ಟಿಸಿದನು. ಈ ಕಟ್ಟಡದ ಮಾಳಿಗೆ ಮೇಲಿನಿಂದ ನಗರದ ಕೋಟೆಯ ಅವಶೇಷಗಳ ಸುಂದರ ದೃಶ್ಯವನ್ನು ನೋಡಬಹುದು. ನಂತರದ ಕಾಲದಲ್ಲಿ ಇಲ್ಲಿ ಕೊಠಡಿಗಳನ್ನು ನಿರ್ಮಿಸಲು ಈ ಪ್ರದೇಶವನ್ನು ಅಗೆಯುತ್ತಿದ್ದಾಗ, ಒಡೆದ ಚೀನಾ ಪಾತ್ರೆಗಳು ಸಿಕ್ಕಿದ್ದರಿಂದ ಇದಕ್ಕೆ ಚೀನೀ ಮಹಲ್ ಎಂಬ ಹೆಸರು ಬಂದಿದೆ.



ಜಲ ಮಂದಿರ್

# ಪ್ರಾರ್ಥನಾ ಮಂದಿರ ಅಥವಾ ಮಸೀದಿಗಳು



## ಜುಮ್ಮಾ ಮಸೀದಿ

ಜುಮ್ಮಾ ಮಸೀದಿಯು ಅನೇಕ ವಿಶೇಷಗಳಿಂದ ಕೂಡಿದ ಆದಿಲ್‌ಶಾಹಿ ವಾಸ್ತುಶಿಲ್ಪದ ಆರಂಭದ ಲಕ್ಷಣಗಳನ್ನು ವ್ಯಕ್ತಪಡಿಸುತ್ತದೆ. ಆದರೆ ವಾಸ್ತವವಾಗಿ ಇದರಲ್ಲಿ ಬಹಮನಿ ವಾಸ್ತುಶಿಲ್ಪದ ಕೆಲವು ಲಕ್ಷಣಗಳ ಮುಂದುವರಿಕೆಯೂ ಕಾಣಬರುತ್ತವೆ. ಆದುದರಿಂದ ಇದು ಆದಿಲ್‌ಶಾಹಿ ವಾಸ್ತುಶಿಲ್ಪದ ಪ್ರಾರಂಭಿಕ ಹಂತದ ಉತ್ತಮ ಉದಾಹರಣೆಯಾಗಿದೆ. ಇದರಲ್ಲಿ ಕಂಡುಬರುವ ವಿಶೇಷ ಲಕ್ಷಣಗಳೇ ವಿಕಾಸಗೊಂಡು ಗೋಳಗುಮ್ಮಟ ಮತ್ತು ಇಬ್ರಾಹಿಂ ರೋಜಾದಂತಹ ಉತ್ತಮ ವಾಸ್ತುಕೃತಿಗಳಿಗೆ ದಾರಿಮಾಡಿಕೊಟ್ಟವು. ಈ ಮಸೀದಿಯನ್ನು ಮೊದಲನೆಯ ಅಲಿ ಆದಿಲ್‌ಶಾಹನು ಸುಮಾರು ಕ್ರಿ.ಶ 1507ರಲ್ಲಿ ನಿರ್ಮಿಸಿದನು. ಇದು ಬಿಜಾಪುರದಲ್ಲೇ ಅತ್ಯಂತ ದೊಡ್ಡದೂ, ಸುಂದರವೂ ಆದ ಮತ್ತು ಸರಣಿ–ಕಮಾನುಗಳಿರುವ ಮಸೀದಿ. ವಾಸ್ತವವಾಗಿ ಈ ಸರಣಿ

ಜುಮ್ಮಾ ಮಸೀದಿ








ವರ್ಣಚಿತ್ರಗಳಿರುವ ಪ್ರಾರ್ಥನಾಗೂಡು

ಕಮಾನುಗಳೇ ಈ ಮಸೀದಿಯ ಮುಖ್ಯ ಲಕ್ಷಣ. ಪೂರ್ವ ಪ್ರವೇಶದ್ವಾರದಲ್ಲಿರಬೇಕಾಗಿದ್ದ ಎರಡು ಮಿನಾರುಗಳು ಪೂರ್ತಿಯಾಗಿಲ್ಲದೇ ಇರುವುದನ್ನು ಗಮನಿಸಿದರೆ, ಈ ಮಸೀದಿಯು ಪೂರ್ಣವಾಗಿ ನಿರ್ಮಾಣವಾಗಲೇ ಇಲ್ಲವೆಂದೆನಿಸುತ್ತದೆ. ಅಪೂರ್ಣವೆನಿಸಿದರೂ ಇದೊಂದು ಸುಂದರ ಕಟ್ಟಡವೆನ್ನುವುದರಲ್ಲಿ ಸಂದೇಹವಿಲ್ಲ. ಶ್ರೀಮಂತ ವರ್ಣಚಿತ್ರಗಳಿಂದ ಕೂಡಿದ ಪ್ರಾರ್ಥನಾಗೂಡು (ಮಿಹ್ರಾಬ್) ಮತ್ತು ವಿಶೇಷ ವಿನ್ಯಾಸದ ಗುಮ್ಮಟಕ್ಕೆ ಈ ಮಸೀದಿ ಚಿರಪರಿಚಿತವಾಗಿದೆ.

## ಮೆಹ್ತರ್–ಇ–ಮಹಲ್

ಕಲ್ಲನ್ನು ಮೇಣದಂತೆ ಬಳಸಿ ಕಟ್ಟಿದ ಸುಂದರ ಕಟ್ಟಡ ಮೆಹ್ತರ್–ಇ– ಮಹಲ್ ಒಂದು ದೊಡ್ಡ ಮಸೀದಿ ಅಥವಾ ಮಹಲಿನ ಮಹಾದ್ವಾರದಂತಿದೆ. ಅರಕಿಲ್ಲೆಯ ಪೂರ್ವಕ್ಕೆ ಜುಮ್ಮಾ ಮಸೀದಿ ದಾರಿಯಲ್ಲಿರುವ ಈ ಕಟ್ಟಡವನ್ನು ಯಾರು, ಯಾತಕ್ಕಾಗಿ, ಯಾವಾಗ ಕಟ್ಟಿದರೆಂದು ಖಚಿತವಾಗಿ ಹೇಳಲು ಆಧಾರಗಳಿಲ್ಲ. ಆದರೆ





ಮೆಹ್ತರ್–ಇ–ಮಹಲ್

ಶೈಲೀಯವಾಗಿ ಇದು ಬಹುಶಃ ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಕಾಲದಲ್ಲಿಯ ಕಟ್ಟಡವಾಗಿರಬೇಕು. ಸೂಕ್ಷ್ಮ – ಸುಂದರ ಕೆತ್ತನೆಯಲ್ಲಿ ಇದಕ್ಕೆ ಸರಿಗಟ್ಟುವ ಇನ್ನೊಂದು ಕಟ್ಟಡ ಬಿಜಾಪುರದಲ್ಲಿಯೇ ಇಲ್ಲ. ಮಹಾದ್ವಾರದ ಎರಡೂ ಬದಿಗೆ 60 ಅಡಿ ಎತ್ತರದ ಮೋಹಕ ಮಿನಾರುಗಳಿವೆ. ಪ್ರವೇಶ ದ್ವಾರದಲ್ಲಿಯೆ ಮೇಲೆ ಹೋಗಲು ಮೆಟ್ಟಿಲುಗಳಿವೆ. ಬಗೆ–ಬಗೆಯ ಜ್ಯಾಮಿತೀಯ ನಕ್ಷೆಗಳಿರುವ ಕಲ್ಲಿನ ಮೇಲ್ಮಾಳಿಗೆ, ಬದಿಯ ಗೋಡೆಗಳಲ್ಲಿ ರೂಪಿಸಿದ ಬಾಲ್ಕನಿಗಳು, ಅವುಗಳ ಮೇಲಿನ ಹೂ–ಹಣ್ಣುಗಳ ಕೆತ್ತನೆಗಳು, ಚಾಚು ಪೀಠಗಳ ಸಿಂಹ, ಆನೆಗಳ ಚಿತ್ರಣ ಹಿಂದೂ ವಾಸ್ತುಶೈಲಿಯ ಪ್ರಭಾವವನ್ನು ಎತ್ತಿ ತೋರುತ್ತವೆ.

## ಅಂಡೂ ಮಸೀದಿ

ಕ್ರಿ.ಶ. 1608ರಲ್ಲಿ ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನ ಕಾಲದ ಗೃಹಸ್ಥ 'ಏತ್‌ಬಾರ್‌ಖಾನ್' ಎಂಬುವನು ಈ ಮಸೀದಿಯನ್ನು ಕಟ್ಟಿದನೆಂದು ಇಲ್ಲಿನ ಪ್ರವೇಶದ್ವಾರದ ಶಾಸನ ತಿಳಿಸುತ್ತದೆ. ಅರಕಿಲ್ಲೆಯ ಬಾಗಲಕೋಟೆ ರಸ್ತೆಯ ಮೂಲೆಯಲ್ಲಿ ಕಾಣುವ ಎರಡಂತಸ್ತಿನ ಕಟ್ಟಡ ಅಂಡೂ ಮಸೀದಿ ಪೂರ್ವಕ್ಕೆ ಮುಖಮಾಡಿ ನಿಂತಿದೆ. ಮೊದಲ ಅಂತಸ್ತಿನಲ್ಲಿ ಮಿಹ್ರಾಬ್ ಇದ್ದು ಕೆಳ ಅಂತಸ್ತು ಬಹುಶಃ ವಿಶ್ರಾಂತಿ ಧಾಮವಾಗಿರಬೇಕು. ಸುಂದರವಾದ ಅಂಡಾಕಾರದ ಗುಮ್ಮಟದಿಂದಾಗಿ ಅದನ್ನು ಅಂಡಾ(ಅಂಡೂ) ಮಸೀದಿ ಎಂದು ಕರೆದಿರಬಹುದು. ಪ್ರಾರ್ಥನಾ ಮಂದಿರದ ಮೊದಲ ಅಂತಸ್ತು ಸೂಕ್ಷ್ಮ ಕೆತ್ತನೆಯ ಕೆಲಸದಿಂದ ಕೂಡಿದ್ದು ಕೆಳ ಅಂತಸ್ತು ಯಾವ ಕೆತ್ತನೆಯೂ ಇಲ್ಲದೆ ತೀರ ಸರಳವಾಗಿ ಕಟ್ಟಲಾಗಿದೆ.



ಅಂಡೂ ಮಸೀದಿ

## ಮಲಿಕಾಜಹಾನ್ ಬೇಗಮ್ ಮಸೀದಿ

ಅರಕಿಲ್ಲೆಯ ಪಶ್ಚಿಮ ದಿಕ್ಕಿಗೆ, ಬಸ್ ನಿಲ್ದಾಣದ ಹತ್ತಿರದಲ್ಲಿ, ಇರುವ ಚಿಕ್ಕ ಆದರೆ ಸುಂದರವಾದ ಮಸೀದಿಯನ್ನು ಕ್ರಿ.ಶ. 1586ರಲ್ಲಿ ಎರಡನೆಯ ಇಬ್ರಾಹಿಮ್ ಆದಿಲ್‌ಶಾಹನು ತನ್ನ ಹೆಂಡತಿಗಾಗಿ ಕಟ್ಟಿದನು. ಸೂಕ್ಷ್ಮ ಹಾಗೂ ಕುಶಲ ಕುಸುರಿ ಕೆಲಸದ ವಾಸ್ತು ರಚನೆಗೆ ಈ ಮಸೀದಿ ಒಂದು ಸುಂದರ ಉದಾಹರಣೆಯಾಗಿದೆ. 4 ಅಡಿ ಎತ್ತರದ ಕಟ್ಟೆಯ ಮೇಲೆ ಕಟ್ಟಲಾದ ಕಟ್ಟಡದ ಮುಂದೆ ಮಧ್ಯದಲ್ಲಿ ಕಾರಂಜಿಸಹಿತವಾದ ಚಿಕ್ಕ ಪುಷ್ಕರಣಿಯಿದೆ. ಕಮಾನುಗಳು ಹಾಗೂ ಗುಮ್ಮಟದ ಮಧ್ಯದಲ್ಲಿನ ಕಂಗುರಗಳ ಸೂಕ್ಷ್ಮ ಕೆತ್ತನೆ ಕೆಲಸ ಅದ್ಭುತವಾಗಿದೆ. ಛಾವಣಿ ಹಾಗೂ ಗೋಡೆಯ ಮೇಲ್ಭಾಗದಲ್ಲಿ ಮುಂಚಾಚಿ ಕೊಂಡಿರುವ ಸುಂದರವಾದ ಚಾಚುಪೀಠ, ಇಡೀ ಕಟ್ಟಡಕ್ಕೆ ಅನುಪಮ ಶೋಭೆ ತಂದಿದೆ.





# ಸಮಾಧಿಗಳು ಅಥವಾ ಗೋರಿಗಳು



## ಅಲಿ ಶಾಹೀದ್ ಪೀರ್‌ನ ಮಸೀದಿ ಮತ್ತು ಸಮಾಧಿ

ಈ ಮಸೀದಿಯ ನಾಲ್ಕೂ ಬದಿಗೆ 36 1/2 ಅಡಿ ಚಚ್ಚೌಕದ ಕಟ್ಟಡವಿದೆ. ಇದಕ್ಕೆ ಕುತೂಹಲಕರವಾದ ಗುಮ್ಮಟದ ಛಾವಣಿ ಇದೆ. ಮಿಹ್ರಾಬ್ ಹಲವು ರೀತಿಯಲ್ಲಿ ಅಸಾಮಾನ್ಯವಾದುದು. ಮಸೀದಿಯ ಮುಂಭಾಗವು ಬಹಳ ಆಕರ್ಷಕವಾಗಿದೆ. ಮೊದಲನೆಯ ಆದಿಲ್‌ಶಾಹಾನ ಕಾಲದಲ್ಲಿದ್ದ ಹಜರತ್ ಸಯ್ಯದ್ ಅಲಿ ಎಂಬ ಪೀರನು ಈ ಮಸೀದಿಯನ್ನು ಕಟ್ಟಿಸಿದನೆಂದು ಹೇಳಲಾಗಿದೆ. ಸಯ್ಯದ್ ಅಲಿ ಯುದ್ಧದಲ್ಲಿ ಮಡಿದುದರಿಂದ ಆತನಿಗೆ ಶಹೀದ್(ಹುತಾತ್ಮ) ಎಂದು ಹೆಸರಾಯಿತು. ಮಸೀದಿಯ ಈಶಾನ್ಯ ದಿಕ್ಕಿನಲ್ಲಿರುವ ಬಾಗಿಲಿನ ಹೊರಗೆ ಈ ಪೀರನ ಸಮಾಧಿಯ ಮೇಲೆ ಕೇವಲ ಒಂದು ಗೋರಿ ಕಲ್ಲಿದೆ.



## ಇಬ್ರಾಹಿಂ ರೋಜಾ

ಇಬ್ರಾಹಿಂ ರೋಜಾ, ಆದಿಲ್‌ಶಾಹಿ ಶೈಲಿಯಲ್ಲಿ ನಿರ್ಮಿತವಾದ ಇನ್ನೊಂದು ಪ್ರಮುಖವೂ ಸುಂದರವೂ ಆದ ಕಟ್ಟಡ. ಎರಡನೆಯ ಇಬ್ರಾಹಿಂ ಆದಿಲ್ ಶಾಹನು (ಕ್ರಿ.ಶ. 1580–1627) ತನ್ನ ಚಿರನಿದ್ರೆಯ ಸ್ಥಳವನ್ನು ತಾನೇ ವಿನ್ಯಾಸಗೊಳಿಸಿ ಅದರ ನಿರ್ಮಾಣಕ್ಕೆ ಆಜ್ಞೆ ಮಾಡಿದನು. ಇಬ್ರಾಹಿಂ ರೋಜಾದಲ್ಲಿ ಎರಡು ಮುಖ್ಯ ಕಟ್ಟಡಗಳಿವೆ– ಒಂದು ಗೋರಿ ಮತ್ತು ಒಂದು ಮಸೀದಿ. ಈ ಎಲ್ಲವೂ ವಿಶಾಲವಾದ ಚೌಕವಾದ ಅಂಗಳದಲ್ಲಿ ನಿರ್ಮಾಣಗೊಂಡಿವೆ ಹಾಗೂ ಅದರ ಎದುರಿಗೆ ಸುಂದರ ಉದ್ಯಾನವನ್ನು ಅಳವಡಿಸಲಾಗಿದೆ.

ಈ ಎರಡೂ ಭಾಗಗಳ ಪ್ರಮಾಣ ಮತ್ತು ಉದ್ದೇಶ ಭಿನ್ನವಾಗಿದ್ದರೂ, ವಾಸ್ತುಶಿಲ್ಪಿಯು ಇದೆರಡರ ನಡುವಿನ ಕೊಳವನ್ನೂ ಒಟ್ಟುಗೂಡಿಸಿ ಗಾತ್ರ ಮತ್ತು ಶೈಲಿಯಲ್ಲಿ ಒಂದು ರೀತಿಯ ಸಾಮ್ಯತೆಯನ್ನು ತರುವಲ್ಲಿ ಸಫಲನಾಗಿದ್ದಾನೆ. ಆದರೂ ಕೂಡ ಗೋರಿಯು ಮಸೀದಿಗಿಂತ ಹೆಚ್ಚು ಸುಂದರವಾಗಿರುವಂತೆ ಭಾಸವಾಗುತ್ತದೆ.

ಇಲ್ಲಿನ ಮಸೀದಿಯು ವಿನ್ಯಾಸ ಹಾಗೂ ಸುಂದರ ಮುಮ್ಮುಖದಿಂದ ಒಳ್ಳೆಯ ಸೌಧವೆನಿಸಿದೆ. ಗಾತ್ರದಲ್ಲಿ ಸ್ವಲ್ಪ ಸಣ್ಣದೆನಿಸಿದರೂ, ನಾಲ್ಕು ಮೂಲೆಗಳಲ್ಲಿರುವ ಮಿನಾರುಗಳು ಹಾಗೂ ಮಧ್ಯದಲ್ಲಿರುವ ಗುಮ್ಮಟದ ವಿನ್ಯಾಸದಿಂದ ಉತ್ತಮ ಕಟ್ಟಡವೆನಿಸಿದೆ.


ಇಬ್ರಾಹಿಂ ರೋಜಾ




ವಿವಿಧ ಭಾಗಗಳ ಹೊಂದಾಣಿಕೆಯೇ ಈ ಮಸೀದಿಯ ಮುಖ್ಯ ಲಕ್ಷಣ ಮತ್ತು ಹೆಚ್ಚಳ. ಮಧ್ಯದಲ್ಲಿ ಪ್ರವೇಶದ್ವಾರವೂ ಇಕ್ಕೆಲಗಳಲ್ಲಿ ಎರಡು ಮಿನಾರುಗಳೂ ಇವೆ. ಈ ರೀತಿ ಎಲ್ಲ ಭಾಗಗಳೂ ಒಟ್ಟಿನಲ್ಲಿ ಸುಂದರವಾಗಿ ಮಿಳಿತಗೊಂಡಿವೆ. ಇಬ್ರಾಹಿಂ ರೋಜಾವನ್ನು ಅಮೃತಶಿಲೆಯಲ್ಲಿ ನಿರ್ಮಿಸಿದ್ದರೆ ಅದು ತಾಜ್‌ಮಹಲ್‌ಗೆ ಬಲವಾದ ಸ್ಪರ್ಧೆಯನ್ನು ಒಡ್ಡುತ್ತಿತ್ತು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಪ್ರಮಾಣಬದ್ಧತೆ, ಸೂಕ್ಷ್ಮ ಹಾಗೂ ಕಲಾತ್ಮಕ ಕುಸುರಿ ಅಲಂಕರಣ, ಸಧೃಡ ಗಾರೆಯಿಂದ ಆಧಾರರಹಿತವಾಗಿ ನಿರ್ಮಿಸಿದ ಆಶ್ಚರ್ಯಕರ ಮೇಲ್ಛಾವಣಿ ಇವುಗಳಿಂದಾಗಿ ಸಮೀಪದಲ್ಲಿರುವ ಮಸೀದಿಯೂ ಸೇರಿದಂತೆ ಈ ವಾಸ್ತು ಸಮುಚ್ಚಯವು ಅಂದಿನ ವಾಸ್ತುಶಿಲ್ಪಿಗಳ ಅಮೋಘ ಕಲ್ಪನೆ, ಸಂಯೋಜನಾ ಸಾಮರ್ಥ್ಯ, ತಾಂತ್ರಿಕ ನೈಪುಣ್ಯ ಹಾಗೂ ನಿರ್ಮಾಣ ಕೌಶಲಗಳ ಅಸಾಮಾನ್ಯ ಪ್ರತೀಕವಾಗಿದೆ.



## ಗೋಳ ಗುಮ್ಮಟ

ಮುಹಮ್ಮದ್ ಆದಿಲ್‌ಶಾಹನ ಸಮಾಧಿ ಸ್ಥಳವಾದ ಗೋಳಗುಮ್ಮಟ (ಕ್ರಿ.ಶ. 1656)ವು ಹಿಂದೂ–ಇಸ್ಲಾಂ ಶೈಲಿಯ ಅತ್ಯುತ್ಕೃಷ್ಟ ಉದಾಹರಣೆ. ಧ್ವನಿಸಂಯೋಜನೆ, ವಾಸ್ತು ತಂತ್ರಜ್ಞಾನ ಹಾಗೂ ಸೌಂದರ್ಯ ತತ್ವಗಳ ಕಲಾತ್ಮಕ ಸಂಯೋಜನೆಯಿಂದ ರೂಪುಗೊಂಡಿದೆ. ಉನ್ನತ ವೇದಿಕೆಯ ಮೇಲೆ ನಿರ್ಮಿತವಾದ ಈ ಕಟ್ಟಡವು ವಿಸ್ತಾರವಾದ ತಲವಿನ್ಯಾಸ, ಬೃಹತ್ಪ್ರಮಾಣದ ಗುಮ್ಮಟ, ಮೂಲೆಗಳಲ್ಲಿ ಜೋಡಿಸಲಾದ ಅಷ್ಟಕೋನಾಕಾರದ ಮೋಹಕ ಸ್ತಂಭಗೋಪುರ (ಮಿನಾರ್) ಮತ್ತು ವಿಶೇಷವಾಗಿ ತನ್ನ 'ಪಿಸುಗುಟ್ಟುವ ಹಜಾರ'ದಿಂದಾಗಿ ಪ್ರಪಂಚದ ವಾಸ್ತು ನಿರ್ಮಿತಿಗಳಲ್ಲಿಯೇ ಒಂದು ಅದ್ಭುತವೆನಿಸಿದೆ.

ಗೋಳ ಗುಮ್ಮಟ





ಗೋಳ ಗುಮ್ಮಟದ ಒಳನೋಟ

ಇದು ಚೌಕಾಕಾರದಲ್ಲಿದ್ದು, ಪ್ರತಿ ಪಾರ್ಶ್ವವೂ 205 ಅಡಿ ಉದ್ದವಿದ್ದು, ಎತ್ತರ 200 ಅಡಿಗಳಿವೆ. ಇಲ್ಲಿರುವ ನಾಲ್ಕು ದಪ್ಪ ಗೋಡೆಗಳ ಮೇಲೆ 144 ಅಡಿ ವ್ಯಾಸವುಳ್ಳ ದೊಡ್ಡ ಗುಮ್ಮಟವಿದೆ. ಒಳಗಿನಿಂದ ಹಜಾರದ ಅಗಲ 135 ಅಡಿಗಳು ಮತ್ತು ಎತ್ತರ 178 ಅಡಿಗಳು. ಒಟ್ಟಿನಲ್ಲಿ ಇದರ ವಿಸ್ತಾರ ಹದಿನೆಂಟು ಸಾವಿರ ಚದರಡಿಗೂ ಮೀರಿದೆ. ಹೀಗೆ ವಾಸ್ತುಶಿಲ್ಪ ಪ್ರಪಂಚದಲ್ಲಿ ಗೋಳಗುಮ್ಮಟ ವಿವಿಧ ಭಾಗಗಳ ಬೃಹತ್ತಿನಿಂದಾಗಿಯೇ ಶ್ರೇಷ್ಠವಾಗಿ ಮೆರೆಯುತ್ತಿದೆ.


ಈ ಕಟ್ಟಡದ ವಿವಿಧ ಭಾಗಗಳನ್ನು ನಿಪುಣತೆಯಿಂದ ವಿನ್ಯಾಸಗೊಳಿಸಿರುವುದು, ಕಮಾನುಗಳು, ಕಾರ್ನೀಸುಗಳು, ಅಲಂಕೃತ ಗೋಡೆಗಳು ಮತ್ತು ಮುಖ್ಯ ಗುಮ್ಮಟವನ್ನು ಮನೋಹರವಾಗಿ ಸಾಮರಸ್ಯಗೊಳಿಸಿರುವುದು ಇದರ ವೈಶಿಷ್ಟ್ಯಪೂರ್ಣ ಇಂಜಿನಿಯರಿಂಗ್ ತಾಂತ್ರಿಕತೆಗೆ ಕನ್ನಡಿ ಹಿಡಿದಂತಿದೆ. ತುಂಬಾ ಜಾಣ್ಮೆಯಿಂದ ಚೌಕಾಕಾರ ವಿನ್ಯಾಸದ ಹಜಾರವನ್ನು ಎಂಟು ಕೋನಗಳಾಗಿ ಪರಿವರ್ತಿಸಿ, ಅದರ



ಮೇಲೆ ಗುಮ್ಮಟದ ಇಡೀ ಭಾರವೇ ನಿಲ್ಲುವಂತೆ ಮಾಡಿರುವುದು ಗಮನಾರ್ಹವಾದ ಸಾಧನೆ.
ಈ ಗುಮ್ಮಟವು ಇಡೀ ಖಂಡದಲ್ಲಿ ಏಷ್ಯಾದಲ್ಲೇ ಅತ್ಯಂತ ದೊಡ್ಡದು ಮತ್ತು ಪ್ರಪಂಚದಲ್ಲಿಯೇ ಎರಡನೆಯದು. ಗುಮ್ಮಟವು ಗಾರೆಯಿಂದ ನಿರ್ಮಿತವಾದ ಕಮಾನು ಚಾವಣಿಯಾಗಿದ್ದು ಇದರ ದಪ್ಪ ಹತ್ತು ಅಡಿಗಳಾಗಿದ್ದು, ಇದರಲ್ಲಿ ಆರು ಕಿರು ದ್ವಾರಗಳಿವೆ. ಸೌಧದ ಮೇಲಕ್ಕೆ ಹತ್ತಲು ನಾಲ್ಕು ಕಡೆಗಳಲ್ಲಿ ಆರು ಹಂತ ಮೆಟ್ಟಿಲುಗಳಿವೆ. ಇವುಗಳ ತುದಿಯಲ್ಲಿ ಸಣ್ಣ ಗುಮ್ಮಟಗಳಿವೆ. ಇವುಗಳಿಂದ ಇಡೀ ಸೌಧದ ಸೌಂದರ್ಯ ಹೆಚ್ಚಿದೆ.

ಈ ಕಟ್ಟಡದ ಇನ್ನೊಂದು ಹೆಚ್ಚಳವೆಂದರೆ ಪಿಸುಮಾತಿನ ಮೊಗಸಾಲೆ. ಇದರಲ್ಲಿ ನುಡಿಯುವ ತೀರ ಮೆಲುಧ್ವನಿಯೂ ಕೂಡ ಕನಿಷ್ಠ ಹತ್ತು ಬಾರಿ ಪ್ರತಿಧ್ವನಿಸುತ್ತದೆ. ಆದುದರಿಂದ ಇದು ಪ್ರಪಂಚದಲ್ಲೇ ಪಿಸುಮಾತಿನ ಗ್ಯಾಲರಿ ಎಂದು ಪ್ರಸಿದ್ಧಿ ಪಡೆದಿದೆ.

ಗೋಳ ಗುಮ್ಮಟದ ಸ್ತಂಭ ಗೋಪುರ (ಮಿನಾರ್)



## ಬಾರಾ ಕಮಾನ್ (ಎರಡನೆಯ ಅಲಿ ಆದಿಲ್‌ಶಾಹಾನ ಸಮಾಧಿ)


ಕ್ರಿ.ಶ. 1670ರಲ್ಲಿ ಎರಡನೆಯ ಅಲಿ ಆದಿಲ್‌ಶಾಹಾನು ತನ್ನ ಸಮಾಧಿಯನ್ನು ವಿನ್ಯಸಿಸಿ ಕಟ್ಟಿಸಲಾರಂಭಿಸಿದನು. ಆ ವೇಳೆಗಾಗಲೇ ರಾಜಧಾನಿಯಲ್ಲಿದ್ದ ಇಬ್ರಾಹಿಂ ರೋಜಾವನ್ನು ಸೌಂದರ್ಯದಲ್ಲಿ ಮತ್ತು ಗೋಳಗುಮ್ಮಟವನ್ನು ಬೃಹದಾಕಾರದಲ್ಲಿ ಮೀರಿಸುವಂತಹ ವಿನೂತನ ಕಟ್ಟಡ ತನ್ನ ಸಮಾಧಿಯಾಗಬೇಕೆಂದು ಬಯಸಿದ್ದನು. ಆದರೆ ಆತನ ಮಹತ್ತ್ವಾಕಾಂಕ್ಷೆ ಈಡೇರದೇ ಈ ಕಟ್ಟಡವು ಅಪೂರ್ಣವಾಗಿಯೇ ಉಳಿದಿದೆ. ಪ್ರಸ್ತುತ ಕಟ್ಟಡವು ಕೋಟೆಯ ವಾಯವ್ಯಕ್ಕೆ ಕಂದಕದ ಹೊರಗಿನಿಂದ ಸುಮಾರು ನೂರಗಜ ದೂರದಲ್ಲಿರುವ ಒಂದು ದೊಡ್ಡ ಚಚ್ಚೌಕಾಕಾರದ ಕಟ್ಟಡವಾಗಿದ್ದು ವೇದಿಕೆಯ ರೂಪದಲ್ಲಿದೆ. ಕಪ್ಪು ಶಿಲೆಯಿಂದ ಮಾಡಿದ ಅಪೂರ್ಣವಾದ ಕಮಾನುಗಳಿದ್ದು ಛಾವಣಿ ಇಲ್ಲ.








## ಪ್ರಾಚ್ಯವಸ್ತು ಸಂಗ್ರಹಾಲಯ



ಗೋಳ ಗುಮ್ಮಟ ಸಂಕೀರ್ಣದ ನಖ್ಖರ್ ಖಾನಾದಲ್ಲಿರುವ ಈ ಸಂಗ್ರಹಾಲಯವು ಕ್ರಿ.ಶ. 1892ರಲ್ಲಿ ಸ್ಥಾಪಿತವಾಗಿದ್ದು ಭಾರತದ ಪ್ರಾದೇಶಿಕ ವಸ್ತು ಸಂಗ್ರಹಾಲಯಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದು. ಬಿಜಾಪುರದ, ವಿಶೇಷವಾಗಿ ಆದಿಲ್‌ಶಾಹಿ ಕಾಲದ, ಸಾಂಸ್ಕೃತಿಕ ವೈಭವವನ್ನು ಸಂಕೇತಿಸುವ ಅನೇಕ ಪ್ರಾಚ್ಯವಸ್ತುಗಳನ್ನು ಹೊಂದಿರುವ ಈ ಸಂಗ್ರಹಾಲಯದಲ್ಲಿ ಆರು ಪ್ರತ್ಯೇಕ ವಿಭಾಗಗಳಿವೆ. ಇವುಗಳಲ್ಲಿ ಕ್ರಮವಾಗಿ ಕರ್ನಾಟಕದ ವಿವಿಧ ಶೈಲಿಗಳನ್ನು ಬಿಂಬಿಸುವ ಮೂರ್ತಿಶಿಲ್ಪ, ಐತಿಹಾಸಿಕ ಪ್ರಾಮುಖ್ಯತೆಯ ಅಮೂಲ್ಯ ಶಾಸನಗಳು, ಸನದ್, ಫರ್ಮಾನ್, ಹಸ್ತಪ್ರತಿ, ದಖನಿ ಶೈಲಿಯ ಉತ್ತಮ ಚಿಕಣಿ ಚಿತ್ರ, ನಾನಾ ರೀತಿಯ ಶಸ್ತ್ರಾಸ್ತ್ರ, ಕಲಾತ್ಮಕ ಬಿದರಿ ಹಾಗೂ ಪಿಂಗಾಣಿ ಪಾತ್ರೆ, ಅಲಂಕೃತ ಜಮಖಾನ ಮತ್ತು ವಸ್ತ್ರಗಳಲ್ಲದೆ ಆದಿಲ್‌ಶಾಹಿ ಕಾಲದ ವಿಶಿಷ್ಟ ನಾಣ್ಯಗಳನ್ನು ಸಹ ಪ್ರದರ್ಶಿಸಲಾಗಿದೆ.









ಸೌಂದರ್ಯ ಮತ್ತು ಶ್ರೀಮಂತಿಕೆಯ ಆಗರವಾಗಿದ್ದ ಈ ರಾಜಧಾನಿಯನ್ನು ಕ್ರಿ.ಶ. 1604ರಲ್ಲಿ ಸಂದರ್ಶಿಸಿದ ಅಕ್ಬರ್ ಚಕ್ರವರ್ತಿಯ ರಾಯಭಾರಿ ಅಸದ್‌ಬೇಗ್‌ನು "ಬಹುಶಃ ವಿಶ್ವದ ಯಾವುದೇ ನಗರವು ಪ್ರವಾಸಿಗಳಿಗೆ ಇದಕ್ಕೂ ಹೆಚ್ಚಿನ ನಯನಾನಂದಕರ ನೋಟವನ್ನು ನೀಡಲಾರದು" ಎಂದಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ.



## ವಸ್ತು ಸಂಗ್ರಹಾಲಯ

**ಸಮಯ:** ಬೆಳಿಗ್ಗೆ 10 ರಿಂದ 5 ಗಂಟೆ
**ಪ್ರವೇಶ ಶುಲ್ಕ:** ಭಾರತೀಯರಿಗೆ, ವಿದೇಶಿಯರಿಗೆ : ₹ 5
(15 ವರ್ಷಗಳ ಒಳಗಿನ ಮಕ್ಕಳಿಗೆ ಉಚಿತ ಪ್ರವೇಶ)


## ಸ್ಮಾರಕಗಳು

**ಸಮಯ:** ಸೂರ್ಯೋದಯದಿಂದ ಸೂರ್ಯಾಸ್ಥಮದವರೆಗೆ
**ಪ್ರವೇಶ ಶುಲ್ಕ:** ಭಾರತ, ಸಾರ್ಕ್ ಮತ್ತು ಬಿಮ್‌ಸ್ಟೆಕ್ (BIMSTEC) ರಾಷ್ಟ್ರಗಳ ಪ್ರಜೆಗಳಿಗೆ : ₹ 5, ಇತರ ರಾಷ್ಟ್ರಗಳ ಪ್ರಜೆಗಳಿಗೆ: ₹ 100
**ವಿಡಿಯೋಗ್ರಾಫ್ ಶುಲ್ಕ:** ಒಂದು ಸ್ಮಾರಕಕ್ಕೆ : ₹ 25
(15 ವರ್ಷಗಳ ಒಳಗಿನ ಮಕ್ಕಳಿಗೆ ಉಚಿತ ಪ್ರವೇಶ)

## ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

**ಪುರಾತತ್ವ ಸಹಾಯಕರು**
ಭಾರತೀಯ ಪುರಾತತ್ವ ಸರ್ವೇಕ್ಷಣ
ಬಿಜಾಪುರ ಉಪ ವಲಯ
ಬಿಜಾಪುರ ದೂ: 08352-240737

**ಅಧೀಕ್ಷಕ ಪುರಾತತ್ವವಿದರು**
ಭಾರತೀಯ ಪುರಾತತ್ವ ಸರ್ವೇಕ್ಷಣ
ಧಾರವಾಡ ವಲಯ
ಧಾರವಾಡ
ದೂ: 0836-2443678 ಫ್ಯಾಕ್ಸ್: 0836-2447539
ಈ-ಮೇಲ್ : circledha.asi@gmail.com


ಮುಲ್ಲಾ ಮಸೀದಿ
ಸುಂಡಾ ಬುರ್ಜ್
ಅಹಮದ್ ಬುರ್ಜ್
ಷಹಾಪುರ ದ್ವಾರ
ಚಾಂದ್ ಬಾವರಿ
ಹೈದರ್ ಬುರ್ಜ್
ಮಾಲಿಕ್ -ಎ- -ಮೈದಾನ್
ಚೋಟ ಅಸರ್ ಮಸೀದಿ
ಅಥಣಿ ಕಡೆಗೆ
ಔರಂಗಜೇಬ್ ಈದ್ಗ
ದಖನಿ ಈದ್ಗ
ಸಿಕಂದರ್ ಆದಿಲ್‌ಷಾಹಿ ಸಮಾಧಿ
ಎರಡನೇ ಆದಿಲ್‌ಷಾಹಿ ಸಮಾಧಿ
ಮಾಲಿಕ್ ಸಾಂಡಲ್ ಸಮಾಧಿ
ಜೋರಾಪುರ ದ್ವಾರ
ಇಬ್ರಾಹಿಂ ರೋಜ
ಅದಾಲತ್ ಮಹಲ್
ಗಗನ್ ಮಹಲ್
ಆನಂದ್ ಮಹಲ್
ಅರಸ್ ಮಹಲ್
ಮೆಕ್ಕಾ ದ್ವಾರ
ಮಲಿಕ್ ಜಾನ್ಸ್ ಸಮಾಧಿ
ಫರಂಗಿ ಷಾಹಿ ಬುರ್ಜ್
ಜಲ್ ಮಂದಿರ್
ಸಾತ್ ಮಂಜಿಲ್
ಮೆಕ್ಕಾ ಮಸೀದಿ
ತಾಜ್ ಬಾವರಿ
ಜೋಡ್ ಗುಂಬಜ್
ಕರೀಂ ಉದ್ದೀನ್ ಮಸೀದಿ
ಔರಂಗಜೇಬ್ ಹೆಂಡತಿಯ ಸಮಾಧಿ
ಅಂಡು ಮಸೀದಿ
ಹಳೆಯ ಇಬ್ರಾಹಿಂ ಮಸೀದಿ
ಗನ್
1ನೇ ಅಲಿ ಆದಿಲ್‌ಷಾಹ
ಚೋಟ ಚೀನಿ ಮಹಲ್
ಜಮಖಂಡಿ ಕಡೆಗೆ
ಲಂಡಾ ಕಸಾಬ್ ಗನ್

## ಬಿಜಾಪುರ ನಕ್ಷೆ